ಪ್ರಬಂಧ

# ಶ್ಯಾವಿಗೆ ಹಬ್ಬ






## ಯೋಗೀಂದ್ರ ಮರವಂತೆ

ಕಲೆ: ಸಂತೋಷ್ ಸಸಿಹಿತ್ಲು


ಇವತ್ತು ಶ್ಯಾವಿಗೆ. ಇಂತಹ ‘ಇವತ್ತು’ ವಾರಾಂತ್ಯದ ದಿನಗಳಾದ ಶನಿವಾರ ಮತ್ತು ಆದಿತ್ಯವಾರ ಅಲ್ಲದಿದ್ದರೆ ಯಾವುದೊ ಹಬ್ಬದ ರಜೆಯ ದಿವಸ ಬರುತ್ತದೆ. ಇಲ್ಲದಿದ್ದರೆ ಶ್ಯಾವಿಗೆಯಂತಹ ಪ್ರಯಾಸಕರ ಸಾಹಸವನ್ನು ದೈನಿಕದ ಕೆಲಸ ಇರುವ ವಾರದ ನಡುವೆ ಯಾರಾದರೂ ಮೈಮೇಲೆ ಎಳೆದುಕೊಳ್ಳುವ ಸಾಧ್ಯತೆ ಕಡಿಮೆ. ಶ್ಯಾವಿಗೆಯನ್ನು ತಲೆಮಾರುಗಳಿಂದ ಬಯಸಿ ತಯಾರಿಸಿ ಪ್ರೀತಿಸಿ ಆಸ್ವಾದಿಸಿ ಬಡಿಸಿ ಉಣಿಸಿ ತಣಿಸಿದ ಪರಂಪರೆಯಲ್ಲಿ ಹುಟ್ಟಿದವರಲ್ಲಿ ನಾನೂ ಒಬ್ಬ. ಸಂಗೀತ ನೃತ್ಯ ಪ್ರಕಾರಗಳಲ್ಲಿ ಇಂತಹ ಶೈಲಿ ಘರಾನಾ ತಿಟ್ಟು ಮಟ್ಟು ಎಂದೆಲ್ಲ ಇದೆಯಲ್ಲ. ಪರಂಪರೆಯೊಂದು ಗುರುವಿನಿಂದ ಶುರುವಾಗಿ ಶಿಷ್ಯರ ತಲಾಂತರಗಳಿಗೆ ವಿಶಿಷ್ಟ ಗುರುತಾಗಿ ಹರಿದು ಹೋಗುವಂತಹದು. ಹೀಗೆ ಹೆಸರಾಂತ ಪರಂಪರೆಯಿಂದ ಬಂದವರನ್ನು ನೋಡಿದ ಕೇಳಿದ ತಕ್ಷಣ ಇನ್ನ್ಯಾರೋ, ‘ಓ ಇವರು ಇಂತಹಲ್ಲಿಗೆ ಸೇರಿದವರು’ ಎಂದು ಸುಲಭವಾಗಿ ಗುರುತಿಸುವುದಿದೆ. ಅಂತಹ ಯಾವುದೇ ಗಾಯಕ ವೈಣಿಕ ನರ್ತಕ ಕಲಾವಿದರ ಸಾಲಿಗೆ ಪರಂಪರೆಗೆ ಸೇರದ ನಾನು, ಆದರೆ, ಒಂದು ವೇಳೆ ಮನುಷ್ಯರೇ ಆರೋಪಿಸಿಕೊಂಡ ಸಾಮೂಹಿಕ ಗುರುತಿಗೆ ಸೇರಲೇಬೇಕಾದ ಸಂದರ್ಭದಲ್ಲಿ ‘ಶ್ಯಾವಿಗೆ ಘರಾನಾ’ಕ್ಕೆ ಮಾತ್ರ ಸೇರಬೇಕಾದವನು ಎಂದು ಅನಿಸಿದ್ದಿದೆ.

ಶ್ಯಾವಿಗೆಯನ್ನು ತಿಂಡಿ ಎಂತಲೋ ಕಜ್ಜಾಯ ಊಟ ಉಪಾಹಾರ ಎಂತಲೋ ವರ್ಗೀಕರಿಸಿದವರಿದ್ದಾರೆ. ಮತ್ತೆ ಕೆಲವರು ಅದರ ತಯಾರಿಯ ಹಿಂದಿನ ಸಿದ್ಧತೆ ಬದ್ಧತೆ ಶ್ರಮ ಸಾಹಸಗಳನ್ನು ಯಾವ ಕ್ಷಣದಲ್ಲೂ ಕಡಿದುಹೋಗಬಲ್ಲ ಉದ್ದುದ್ದದ ಎಳೆಗಳ ಹೆಕ್ಕಿ ಹಿಡಿದು ಕೂಡಿಸಿ ಜೋಡಿಸಿ ತಿನ್ನಬೇಕಾದ ವಿಧಾನವನ್ನು ಕಂಡು ಅಡುಗೆಯ ಪ್ರಕಾರದಿಂದಲೇ ಹೊರಗಿಟ್ಟು ದೂರ ಉಳಿದಿದ್ದಾರೆ. ನನ್ನ ಮಟ್ಟಿಗೆ ಶ್ಯಾವಿಗೆ ಇಷ್ಟು ದೂರೀಕರಿಸುವಿಕೆಗಳನ್ನು ಮಾನವ ಮಿತಿಯ ವಿವರ ವರ್ಣನೆಗಳನ್ನು ಮೀರಬಹುದಾದ ಮಹಾ ಕುಸುರಿ ಕೆತ್ತನೆ ಕಾವ್ಯ.

ಈ ಕಾಲದಲ್ಲಿ ಉಪ್ಪಿಟ್ಟನ್ನು ಪಾಯಸ